

# ಅವಕಾಶಕ್ಕೆ ಆಡಿಷನ್ ಒಂದೇ ದಾರಿ

## ಸಂಭ್ರಮಾ ಗೌಡ

### ಉದಯದ 'ದೊಡ್ಮನೆ ಸೊಸೆ'ಯ ವೀಣಾ

★ *ನಟನೆ ಶುರವಾಗಿದ್ದು ಹೇಗೆ?*

ಚಿಕ್ಕವಳಿದ್ದಾಗ ಹೆಚ್ಚು ಟಿವಿ ನೋಡ್ತಾ ಇದ್ದೆ. ಅದರಲ್ಲೂ 'ಉದಯ ಮ್ಯೂಸಿಕ್' ನನಗೆ ತುಂಬಾ ಇಷ್ಟ ಆಗ್ತಾ ಇತ್ತು. ನೋಡುತ್ತಿದ್ದಂತೆ ಅಲ್ಲಿ ಆ್ಯಂಕರ್ ಆಗಬೇಕು ಎನ್ನುವ ಕನಸು ಗರಿಗೆದರಿತು. ಅದಕ್ಕೆ ಯಾವ ರೀತಿ ಪ್ರಯತ್ನಿಸಬೇಕು ಎನ್ನುವುದೂ ಗೊತ್ತಿರಲಿಲ್ಲ. ತುಮಕೂರು ಜಿಲ್ಲೆ ಕುಣಿಗಲ್ ತಾಲ್ಲೂಕಿನ ಕೀಲಾರ ಎನ್ನುವ ಗ್ರಾಮದವಳು ನಾನು. ಅಪ್ಪ ಶ್ರೀನಿವಾಸ ಕೃಷಿಕರು, ಅಮ್ಮ ಗಿರಿಜಮ್ಮ ಗೃಹಿಣಿ.

ಹಳ್ಳಿಯಲ್ಲಿ ಬೆಳೆದ ನನಗೆ ಅಂತಹ ವಾತಾವರಣವೂ ಇರಲಿಲ್ಲ. ಆಸೆ ಹಾಗೆಯೇ ಕಮರ ತೊಡಗಿತು. ಪಿಯುಸಿ ಮುಗಿಸಿದ ಕೂಡಲೇ ನಾನೂ ಓದುವುದನ್ನು ಅಲ್ಲಿಗೆ ನಿಲ್ಲಿಸಿ ಬೆಂಗಳೂರಿಗೆ ಬಂದೆ. ತಕ್ಷಣ ಉದ್ಯೋಗ ಅನಿವಾರ್ಯವಾಯಿತು. ಬಟ್ಟೆ ಅಂಗಡಿಯಲ್ಲಿ ಕೆಲಸಕ್ಕೆ ಸೇರಿದೆ. ಸ್ವಲ್ಪ ದಿನ ಗಾರ್ಮೆಂಟ್‌ನಲ್ಲಿಯೂ ದುಡಿದೆ. ಅದಾದ ಮೇಲೆ ಟೆಲಿ ಮಾರ್ಕೆಟಿಂಗ್ ನಿರ್ವಹಣೆಯನ್ನೂ ಮಾಡಿದೆ. ಕೆಲಸದ ಸಮಯದಲ್ಲಿ ಕೆಲ ಸ್ನೇಹಿತರಾದರು ಅವರ ಬಳಿ ಆ್ಯಂಕರ್ ಆಸಕ್ತಿ ಬಗ್ಗೆ ಹೇಳಿಕೊಂಡಿದ್ದೆ. ಅವರು ನನಗೆ ನಟನೆ ಕಲಿಯಲು ತರಗತಿಗೆ ಹೋಗಲು ಸಲಹೆ ನೀಡಿದರು. ಒಂದು ಸಂಸ್ಥೆಗೆ ಸೇರಿಯೂ ಬಿಟ್ಟೆ. ಅಷ್ಟರಲ್ಲಿ 'ರಣ ರಣಕ' ಸಿನಿಮಾದಲ್ಲಿ ಅವಕಾಶ ಸಿಕ್ಕಿತು. ಅದರ ಬೆನ್ನಲ್ಲೆ 'ವೀಣಾ' ಪಾತ್ರ ಮಾಡುತ್ತಿದ್ದೇನೆ. ನನ್ನ ಮೂಲ ಹೆಸರು ದಿವ್ಯಾ. ಸಿನಿಮಾಕ್ಕಾಗಿ ಸಂಭ್ರಮಾ ಗೌಡ ಎಂದು ಬದಲಿಸಿಕೊಂಡೆ.

★ *ವೀಣಾ ಪಾತ್ರ ಹೇಗಿದೆ?*

ಮನೆಯಲ್ಲಿ ತುಂಬಾ ವಾಚಾಳಿ. ಪಟಪಟ ಎಂದು ಮಾತನಾಡುತ್ತಾಳೆ. ಹೊರಗಡೆ ತುಂಬಾ ಸೌಮ್ಯ ಸ್ವಭಾವ. ಅಕ್ಕ ಎಂದರೆ ತುಂಬಾ ಇಷ್ಟ. ಆಕೆಗೆ ಅಪ್ಪ ಅಮ್ಮನಿಗಿಂತ ಅಕ್ಕನ ಬಗ್ಗೆ ಒಲವು ಜಾಸ್ತಿ. ಆಕೆಯ ಮದವೆಯಾಗಿದೆ. ಒಂಟಿತನದ ನೋವು ಆಕೆಯದು. ವಾಸ್ತವದಲ್ಲಿ ನನಗದು ಸಾಕಷ್ಟು ಹೋಲಿಕೆ ಇರುವುದರಿಂದ ಪಾತ್ರವನ್ನು ತುಂಬಾ ಸುಲಭವಾಗಿ ಮಾಡುತ್ತಿದ್ದೇನೆ. ನಮ್ಮ ಅಕ್ಕಂದಿರ ಮದುವೆಯಾಗಿದೆ. ನಾನೊಬ್ಬಳೆ ಇರುವುದು.

★ *ಈ ಪಾತ್ರ ಹೇಗೆ ಸಿಕ್ಕಿತು? ಅದಕ್ಕೆ ಏನು ಮಾಡಬೇಕು?*

ಆಡಿಷನ್‌ಗಳಿಗೆ ಹೋಗುತ್ತಿದ್ದೆ. ನನ್ನ ಸಂಪರ್ಕದಲ್ಲಿ ಇದ್ದ ಸ್ನೇಹಿತರು ಆಡಿಷನ್ ಇದ್ದಾಗ ಹೇಳುತ್ತಿದ್ದರು. ನನ್ನನ್ನು ಮೊದಲ ಬಾರಿಗೆ ಉದಯ ಟಿವಿ ಗುರುತಿಸಿ ಅವಕಾಶ ಕಲ್ಪಿಸಿದೆ. ಇದಕ್ಕೆ ಕಾರಣರಾದ ಎಲ್ಲರಿಗೂ ಕೃತಜ್ಞಳಾಗಿದ್ದೇನೆ. ಆಡಿಷನ್‌ಗೆ ವಿಶೇಷ ಸಿದ್ಧತೆಯ ಅಗತ್ಯ ಇಲ್ಲ ಅಂತ ನನಗೆ ಅನ್ನಿಸಿದೆ. ಸಾಮಾನ್ಯವಾಗಿ ನಿತ್ಯದ ಘಟನೆ, ಅನುಭವಗಳಿಗೆ ಸಂಬಂಧಿಸಿದಂತೆ ನಟಿಸಬೇಕಾಗುತ್ತದೆ. ಆಗ ನಮ್ಮ ತಲೆಯಲ್ಲಿ ಕ್ಯಾಮೆರಾ ಎದುರು ನಿಂತಿದ್ದೇವೆ ಎನ್ನುವ ಭಾವನೆ ಇರಬಾರದು. ಆಮೇಲೆ ಡೈಲಾಗ್‌ಗಳನ್ನು ಹೇಳುತ್ತಿದ್ದೇನೆ ಎನ್ನುವುದನ್ನು ಮರೆತುಬಿಟ್ಟರೆ ಖಂಡಿತ ಯಶಸ್ವಿಯಾಗಿ ಆಡಿಷನ್ ಕೊಡಬಹುದು. ಕೃತಕತೆಗಿಂತ ಸಹಜತೆಯನ್ನು ಬಿಂಬಿಸುವುದೇ ಮುಖ್ಯ ಎಂದು ನಾನು ಭಾವಿಸಿದ್ದೇನೆ.

★ *ನಿಮ್ಮ ಆಯ್ಕೆ ಸಿನಿಮಾನಾ/ ಟಿವಿನಾ?*

ನನಗೆ ಟಿವಿಯಲ್ಲಿಯೇ ಪ್ರಧಾನ ಪಾತ್ರಗಳಲ್ಲಿ ಅಭಿನಯಿಸಬೇಕು ಎನ್ನುವ ಆಶೆ ಇದೆ. ನನ್ನ ಅಪ್ಪ ನನ್ನನ್ನು ಬೆಂಬಲಿಸುವಂತೆ ಮಾಡಿದ್ದು ಟಿವಿ. ಈಗ ಅವರಿಗೆ ಮತ್ತಷ್ಟು ಖುಷಿ ಕೊಡಬೇಕು. ನನ್ನೂರಿಗೂ ಹೆಮ್ಮೆ ಅನ್ನಿಸಬೇಕು. ಅದಕ್ಕಾಗಿ ಟಿವಿಯನ್ನೇ ಆಯ್ಕೆ ಮಾಡಿಕೊಳ್ಳುತ್ತೇನೆ. ಮೊದಲು ಸಿನಿಮಾಕ್ಕೆ ಅವಕಾಶ ಸಿಕ್ಕಿದೆ ಎನ್ನುವುದನ್ನು ಕೇಳಿದ ತಕ್ಷಣ ನಮ್ಮ ಅಪ್ಪ ತುಂಬಾ ವಿರೋಧ ಮಾಡಿದ್ದರು. ಅವರಿಗೆ ಹೇಗೋ ಮದುವೆ ಮಾಡಿದರೆ ಸಾಕು ಎನ್ನುವ ಯೋಚನೆ ಇತ್ತು. ಆದರೆ ನನಗೆ ನಟಿಸಲೇಬೇಕು ಎನ್ನುವ ಹಟ. ಅವರ ವಿರೋಧದ ನಡುವೆ ನಟಿಸಿದೆ. 'ದೊಡ್ಮನೆ ಸೊಸೆ'ಯಲ್ಲಿ ನಟಿಸಲು ಆರಂಭಿಸಿದ ಮೇಲೆ ನಮ್ಮ ತಂದೆಗೆ ನನ್ನ ಮೇಲೆ ವಿಶ್ವಾಸ ಮೂಡಿದೆ. ಅವರು ದಿನವೂ ನನ್ನನ್ನು ಟಿವಿಯಲ್ಲಿ ನೋಡುತ್ತಿದ್ದಾರೆ. ಅಲ್ಲದೆ ನನ್ನನ್ನೂ ಪ್ರೋತ್ಸಾಹಿಸುತ್ತಿದ್ದಾರೆ. ನನ್ನ ತಂದೆಯಲ್ಲಿ ಈ ರೀತಿಯ ಬದಲಾವಣೆಯನ್ನು ಮೂಡಿಸಿದ ಟಿವಿಯನ್ನು ಹೇಗೆ ತಾನೆ ಮರೆಯಲು ಸಾಧ್ಯ?

★ *ನಟಿ ಆಗದಿದ್ದರೆ ಏನಾಗುತ್ತಿದ್ರಿ?*

ನನಗೆ ಮಹತ್ತರ ಕನಸುಗಳು ಇರಲಿಲ್ಲ. ಎಲ್ಲೋ ಒಮ್ಮೆ ಆ್ಯಂಕರ್ ಆಗಲು ಆಶೆಪಟ್ಟವಳಿಗೆ ಅದಕ್ಕಿಂತ ಹೆಚ್ಚಿನದು ಸಿಕ್ಕಿದೆ. ಅದನ್ನು ಉಳಿಸಿಕೊಂಡು ಹೋದರೆ ಸಾಕು. ನಾನು ನಟಿಯಾಗದಿದ್ದರೆ ಗೃಹಿಣಿಯಾಗಿ ಇರುತ್ತಿದ್ದೆ.

■ ರಾಘವೇಂದ್ರ